## ಕರ್ನಾಟಕ ಸರ್ಕಾರ

ಸಂ.ಗ್ರಾಅಪ/29/ಎಸ್.ಜೆ.ವೈ.-2011 (ಎ-8)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 28.08.2013.

## ಸುತ್ತೋಲೆ

ವಿಷಯ: ಸಾಮಾಜಿಕ, ಆರ್ಥಿಕ ಮತ್ತು ಜಾತಿಗಣತಿ-2011 (ಎಸ್ಇಸಿಸಿ-2011)ವಸತಿ ರಹಿತ ಕುಟುಂಬಗಳನ್ನು ಗಣತಿಗೆ ಒಳಪಡಿಸುವ ಬಗ್ಗೆ.

-: 0 :-

ಸಾಮಾಜಿಕ, ಆರ್ಥಿಕ ಮತ್ತು ಜಾತಿಗಣತಿ-2011(ಎಸ್ಇಸಿಸಿ-2011)ರ ಪ್ರಮುಖ ಉದ್ದೇಶವೆಂದರೆ ರಾಜ್ಯದಲ್ಲಿರುವ ಎಲ್ಲಾ ಕುಟುಂಬಗಳನ್ನು, ಯಾವುದೇ ಕುಟುಂಬಗಳನ್ನು ಕೈಬಿಡದೇ ಅಥವಾ ಪುನರಾವರ್ತನೆಯಾಗದಂತೆ ಎಚ್ಚರವಹಿಸಿ ಸಂಪೂರ್ಣವಾಗಿ ಗಣತಿಗೆ ಒಳಪಡಿಸುವುದು. ಗಣತಿಯಲ್ಲಿ ಸಮಾಜದ ಅತ್ಯಂತ ದುರ್ಬಲವರ್ಗದ ವಸತಿ ರಹಿತ ಗುಂಪು ಪ್ರಮುಖ ಸ್ಥಾನವನ್ನು ಪಡೆದಿದ್ದು ಅಂತಹ ವಸತಿರಹಿತ ವರ್ಗದ ಕುಟುಂಬಗಳು ವಾಸಿಸುವ ಸ್ಥಳಗಳನ್ನು ಗುರುತಿಸಿ ಗಣತಿಗೊಳಪಡಿಸಲು ವ್ಯವಸ್ಥಿತವಾದ ಕ್ರೀಯಾ ಯೋಜನೆಯನ್ನು ರೂಪಿಸಿ ಸಂಪೂರ್ಣವಾಗಿ ಗಣತಿಗೊಳಪಡಿಸಿ ಯಶಸ್ವಿಗೊಳಪಡಿಸುವುದು ಅಗತ್ಯವಾಗಿರುತ್ತದೆ.

ವಸತಿರಹಿತ ಕುಟುಂಬಗಳ ಗಣತಿಯನ್ನು ಸಾಮಾನ್ಯವಾಗಿ ಗಣತಿ ಕಾರ್ಯದ ಅಂತಿಮ ದಿನ ಅಥವಾ ಸರ್ಕಾರ ಅಧಿಕೃತವಾಗಿ ಪ್ರಕಟನೆ ಮಾಡಿದ ದಿನಾಂಕದ ರಾತ್ರಿಯಂದು ಗಣತಿ ಕಾರ್ಯ ನಡೆಸಲಾಗುತ್ತದೆ.

- **ವಸತಿರಹಿತ ಕುಟುಂಬಗಳ ಗಣತಿಯನ್ನು ನಡೆಸಲು ಪೂರ್ವಭಾವಿಯಾಗಿ ಗಣತಿಯೋಜನೆ ಮಾಡಿಕೊಳ್ಳುವುದು ಅವಶ್ಯವಿದ್ದು ಈಗಾಗಲೇ ಗಣತಿದಾರರು ಮೇಲ್ವಿಚಾರಕರು ಸಾಮಾನ್ಯ ಗಣತಿ 2011ರ ವೇಳೆಯಲ್ಲಿ, ಈ ರೀತಿಯ ವಸತಿರಹಿತ ಕುಟುಂಬಗಳು ವಾಸಿಸುವ ಸ್ಥಳಗಳನ್ನು ಗುರುತ್ತಿಟ್ಟುಕೊಳ್ಳಲು ಸೂಚಿಸಲಾಗಿರುತ್ತದೆ.**

- **ದೇವಸ್ಥಾನ, ಮಸೀದಿ, ಚರ್ಚ್, ರೈಲ್ವೆ ನಿಲ್ದಾಣಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ಶಾಲಾ ಆವರಣಗಳಲ್ಲಿ, ಹೊಲ ಗದ್ದೆಗಳಲ್ಲಿ, ದೊಡ್ಡ ಸಿಮೆಂಟ್ ಪೈಪ್‌ಗಳಲ್ಲಿ, ಸೇತುವೆ ಕೆಳಗಡೆ, ಮೆಟ್ಟಿಲುಗಳ ಮೇಲೆ, ನೈಟ್ ಶೆಲ್ಟರ್, ರೈನ್ ಬಸೇರ ಹಾಗೂ ಬಯಲು ಪ್ರದೇಶಗಳಲ್ಲಿ ವಾಸಿಸುವರಾಗಿರುತ್ತಾರೆ. ವಸತಿರಹಿತ ಕುಟುಂಬಗಳು ಸಾಮಾನ್ಯವಾಗಿ ಯಾವುದೇ ಶಾಶ್ವತ ಸೂರಿಲ್ಲದೆ, ಹಗಲೆಲ್ಲ ಚಿಂದಿ ಆಯುವುದು, ಭಿಕ್ಷಟನೆ ಮಾಡುವುದು ಇತ್ಯಾದಿ ಕಾರ್ಯವನ್ನು ಮಾಡುವವರಾಗಿರುತ್ತಾರೆ.**

- **ಈ ಮಾಹಿತಿಯನ್ನು ಆಧರಿಸಿ ಇನ್ಯಾವುದೇ ವಸತಿರಹಿತ ಆಶ್ರಯದಾಣಗಳು ಚಾರ್ಜ್ ಅಧಿಕಾರಿಗಳ ಗಮನಕ್ಕೆ ಬಂದಿದ್ದಲ್ಲಿ ಆ ಪ್ರದೇಶಗಳನ್ನು ಪಟ್ಟಿಮಾಡಿ, ನಿಗದಿಪಡಿಸಿದ ವಿಶೇಷ ಗಣತಿ ಕಾರ್ಯಕ್ರಮದಂದು ಅವಶ್ಯ ಪೋಲೀಸ್ ಬಂದೊಬಸ್ತು ಮತ್ತು ಬೆಳಕಿನ ವ್ಯವಸ್ಥೆಯೊಂದಿಗೆ ಗಣತಿಕಾರ್ಯವನ್ನು ವ್ಯವಸ್ಥಿತವಾಗಿ ಹಮ್ಮಿಕೊಂಡು ನಿರ್ವಹಿಸತಕ್ಕದ್ದು. ಈ ಗಣತಿ ಕಾರ್ಯಕ್ಕೆ ಸಾದ್ಯವಾದಷ್ಟು ಮಟ್ಟಿಗೆ ಪುರಷ ಗಣತಿದಾರರನ್ನು ತೊಡಗಿಸುವುದು. ಈ ಬಗ್ಗೆ ಪೂರ್ವಭಾವಿಯಾಗಿ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿರುವ ಗಣತಿ ಸಮನ್ವಯ ಸಮಿತಿ ಸಭೆಗಳನ್ನು ನಡೆಸಿ, ಚರ್ಚಿಸಿ ಈ ಗಣತಿಗೆ ರೂಪುರೇಷೆಗಳನ್ನು ರೂಪಿಸಿಕೊಳ್ಳುವುದು.**

2. ಆಯುಕ್ತರು ಹಾಗೂ ಪ್ರಧಾನ ಎಸ್ಇಸಿಸಿ–2011 ಅಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೇಂದ್ರ ಕಛೇರಿ, ಹಡ್ಸನ್ ವೃತ್ತ, ಬೆಂಗಳೂರು.
3. ಆಯುಕ್ತರು ಹಾಗೂ ಪ್ರಧಾನ ಎಸ್ಇಸಿಸಿ–2011 ಅಧಿಕಾರಿಗಳು, ಮಹಾನಗರ ಪಾಲಿಕೆ: ಮೈಸೂರು, ಮಂಗಳೂರು, ಬೆಳಗಾಂ, ಹುಬ್ಬಳ್ಳಿ–ಧಾರವಾಡ, ಗುಲ್ಬರ್ಗ, ಬಳ್ಳಾರಿ ಮತ್ತು ದಾವಣಗೆರೆ.
4. ನಿರ್ದೇಶಕರು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಗಣತಿ ನಿರ್ದೇಶನಾಲಯ, ಕೇಂದ್ರಿಯ ಸದನ, ಕೋರಮಂಗಲ, ಬೆಂಗಳೂರು
6. ವ್ಯವಸ್ಥಾಪಕ ನಿರ್ದೇಶಕರು, ಬಿ.ಇ.ಎಲ್. ಜಾಲಹಳ್ಳಿ ಅಂಚೆ, ಬೆಂಗಳೂರು – ಇವರಿಗೆ ಕಳುಹಿಸ್ತಾ ಅಗತ್ಯವಿರುವ ಡಿ.ಇ.ಓ ಗಳನ್ನು ನಿಯೋಜಿಸಲು ಕೋರಿದೆ.